

# ‘ಜನರ ನಗುವಲ್ಲಿ ದೇವರನ್ನು ಕಾಣುವಾಸೆ’

**ತಮ್ಮ ಸಹಜ ನಟನೆ, ಮಾತಿನ ವೈಖರಿಯಿಂದ ಕನ್ನಡ ಚಿತ್ರರಂಗದಲ್ಲಿ ಕಾಮಿಡಿಯನ್ ಆಗಿ ಗುರುತಿಸಿಕೊಂಡಿರುವ ನಟ ಧರ್ಮಣ್ಣ ಕಡೂರು, ಇದೀಗ ‘ಕೌಟುಂಬಿಕ ಹಾಸ್ಯ’ ಹೂರಣದ ‘ರಾಜಯೋಗ’ ಸಿನಿಮಾದ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.**

**ಸುಮಲತಾ ಎನ್.**

ಹಾಸ್ಯದ ಸೂತ್ರದೊಂದಿಗೆ ಚಿತ್ರರಂಗಕ್ಕೆ ಕಾಲಿಟ್ಟ ನಟ ಧರ್ಮಣ್ಣ ಕಡೂರು, ತಮ್ಮ ಸಹಜ ಅಭಿನಯದಿಂದಲೇ ಗಮನ ಸೆಳೆದವರು. ಸಾಲುಸಾಲು ಸಿನಿಮಾಗಳು ಅವರ ಪ್ರತಿಭೆಗೆ ಸಾಣೆ ಹಿಡಿದಿದ್ದು, ಇದೀಗ ‘ರಾಜಯೋಗ’ ಸಿನಿಮಾದಲ್ಲಿ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ‘ಕೌಟುಂಬಿಕ ಹಾಸ್ಯ’ ಪ್ರಕಾರದ ಈ ಸಿನಿಮಾ ಮೂಲಕ ಜನರಿಗೆ ಹಾಸ್ಯರಸದೌತಣ ನೀಡಲು ಅಣಿಯಾಗಿದ್ದಾರೆ.

ಚಿಕ್ಕಮಗಳೂರಿನ ಕಡೂರಿನಲ್ಲಿ ಹುಟ್ಟಿ ಬೆಳೆದ ಧರ್ಮಣ್ಣ, ಅಪ್ಪಟ ಹಳ್ಳಿ ಪ್ರತಿಭೆ. ಓದುತ್ತಲೇ, ಪೇಪರ್ ಹಾಕುವ, ಹೂ ಮಾರುವ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಿದ್ದ ಅವರಿಗೆ, ತಮ್ಮ ಬದುಕಿನ ದಾರಿ ಸ್ಪಷ್ಟವಾಗಿ ಕಂಡದ್ದು ಪದವಿ ಓದುವಾಗ. ಕಲಾ ವಿಭಾಗದಲ್ಲಿ ಪದವಿಗೆ ಸೇರಿಕೊಂಡ ಧರ್ಮಣ್ಣ ಅವರನ್ನು ನಾಟಕ ಲೋಕವೂ ತನ್ನತ್ತ ಸೆಳೆದಿತ್ತು. ಕಾಲೇಜಿನಲ್ಲಿ ಮಾಡುತ್ತಿದ್ದ ನಾಟಕಗಳು ಅವರನ್ನು ರಂಗಭೂಮಿಯತ್ತ ವಾಲುವಂತೆ ಪ್ರೇರೇಪಿಸಿತು. ಹಲವು ನಾಟಕಗಳಲ್ಲಿ ಅಭಿನಯಿಸಿದ ಅನುಭವಗಳು ಅವರಿಗೆ ಗಟ್ಟಿ ತಳಹದಿ ರೂಪಿಸಿಕೊಟ್ಟಿತ್ತು.

ಕಾಲೇಜು ಮುಗಿದ ನಂತರ ರಂಗಭೂಮಿಯಲ್ಲೇ ನೆಲೆ ಹುಡುಕುತ್ತಾ, ಕಲಾವಿದ ಯಶವಂತ ಸರದೇಶಪಾಂಡೆ ಅವರ ‘ಗುರು ಇನ್‌ಸ್ಟಿಟ್ಯೂಟ್ ಹುಬ್ಬಳ್ಳಿ’ ರಂಗತಂಡ ಸೇರಿದ ಧರ್ಮಣ್ಣ, 7 ವರ್ಷಗಳ ಕಾಲ ತಂಡದಲ್ಲಿ ಕಲಾವಿದನಾಗಿ, ತಂತ್ರಜ್ಞನಾಗಿ ರಂಗಭೂಮಿಯ ಸಣ್ಣಪುಟ್ಟ ಸಂಗತಿ, ಸೂಕ್ಷ್ಮಗಳನ್ನು ಅರಿತುಕೊಂಡರು. ಇಡೀ ಕರ್ನಾಟಕ ಸುತ್ತುತ್ತಾ ಸಾವಿರಾರು ನಾಟಕ ಪ್ರದರ್ಶನಗಳನ್ನು ನೀಡಿದರು.

‘ಪ್ರತಿ ನಾಟಕ ಪ್ರದರ್ಶನವೂ ಹೊಸ ಹೊಸ ಅನುಭವಗಳನ್ನು ನೀಡುತ್ತಲೇ ಬೆಳೆಸಿತು. ನಾನು ಬಳಸುವ ಪದಗಳು ನನ್ನ ಜೊತೆಯಿರುವವರಿಗೆ ಮಜವಾಗಿ ಕೇಳುತ್ತವೆ. ಇದು ಕಾಮಿಡಿಯನ್ ಆಗಿ ನನಗೆ ಪ್ಲಸ್‌ಪಾಯಿಂಟ್’ ಎಂದು ಹೇಳುತ್ತಾರೆ ಅವರು. ‘ರಂಗಭೂಮಿ ನನಗೆ ಮಾತು ಕಲಿಸಿತು. ಸರಳತೆ ಹೇಳಿಕೊಟ್ಟಿತು. ಸಹಜತೆಯಲ್ಲಿರುವ ಸೌಂದರ್ಯ ಕಂಡುಕೊಳ್ಳುವುದನ್ನು ಗೊತ್ತಿಲ್ಲದೇ ಮೈಗೂಡಿಸಿದ್ದು ರಂಗಭೂಮಿ. ಜೀವನವನ್ನು ಸುಂದರವಾಗಿ ಸಾಗಿಸಬಹುದು ಎಂಬುದನ್ನು ಚಿಕ್ಕವಯಸ್ಸಿಗೇ ಅರ್ಥ ಮಾಡಿಸಿದ್ದು ರಂಗಭೂಮಿ. ನನ್ನ ಹಾಸ್ಯ, ಭಾಷೆ ಇವೆಲ್ಲ ನನ್ನ ಊರು ಹಾಗೂ ರಂಗಭೂಮಿ ಕೊಟ್ಟಿರುವ ವರ’ ಎಂದು ಧನ್ಯತೆ ವ್ಯಕ್ತಪಡಿಸುತ್ತಾರೆ.

ರಂಗಭೂಮಿಯಿಂದ ಸಿನಿಮಾ ಜಗತ್ತಿಗೆ ಧರ್ಮಣ್ಣ ಪರಿಚಯವಾದದ್ದು ನಟ ಡಾಲಿ ಧನಂಜಯ್ ಅವರ ‘ಜಯನಗರ 4th ಬ್ಲಾಕ್ ಕಿರುಚಿತ್ರದ ಮೂಲಕ. ಈ ಕಿರುಚಿತ್ರವೇ, ‘ರಾಮಾ ರಾಮಾ ರೇ’ ಸಿನಿಮಾಗೆ ಉತ್ತಮ ಅಡಿಪಾಯವಾಯಿತು. 2016ರಲ್ಲಿ ‘ರಾಮಾ ರಾಮಾ ರೇ’ ಸಿನಿಮಾ ನಂತರ ಕನ್ನಡ ಚಿತ್ರರಂಗಕ್ಕೆ ಧರ್ಮಣ್ಣ ಚಿರಪರಿಚಿತ ಕಲಾವಿದರಾದರು.

‘ರಾಮಾ ರಾಮಾ ರೇ ಸಿನಿಮಾದ ಮೊದಲ ದಿನದ ಶೂಟಿಂಗ್‌ನಲ್ಲಿ, ಅರ್ಧ ದಿನ ನನ್ನ ಒಂದು ಟೇಕ್ ಕೂಡ ಓಕೆ ಆಗಿರಲಿಲ್ಲ. ಕ್ಯಾಮೆರಾ ಎಲ್ಲಿರುತ್ತದೆ, ನಾನು ಎಲ್ಲಿ ನೋಡಬೇಕು ಎಂದೇ ಗೊತ್ತಾಗುತ್ತಿರಲಿಲ್ಲ. ರಂಗಭೂಮಿ–ಸಿನಿಮಾಗೆ ಒಂದು ತಿಳಿಯಾದ ಸೂಕ್ಷ್ಮವಿದೆ. ಆ ಸಣ್ಣ ಎಳೆಯನ್ನು ತಿಳಿದಿರಬೇಕು. ಅದು ತಿಳಿಯದೇ ಬೆರೆಸಿಬಿಟ್ಟರೆ ಅದು ಅಭಿನಯ ಎಂದೇ ಅನಿಸಿಬಿಡುತ್ತದೆ. ನನಗೂ ಅಂಥ ಅನುಭವ ಆಗಿತ್ತು. ಮೊದಲ ದಿನ ಮಧ್ಯಾಹ್ನ 2ರಿಂದ ಸಂಜೆ ಐದೂವರೆ ತನಕ ಒಂದೂ ಟೇಕ್ ಓಕೆ ಆಗಿರಲಿಲ್ಲ. ನನ್ನ ಬದಲು ಬೇರೆಯವರನ್ನು ತೆಗೆದುಕೊಳ್ಳಿ ಎಂದು ನಾನೇ ಹೇಳಿಬಿಟ್ಟೆ. ಆದರೆ ಇಡೀ ಸಿನಿಮಾ ತಂಡ ಧೈರ್ಯ ತುಂಬಿತು. ಅವತ್ತು ರಾತ್ರಿಯೆಲ್ಲಾ ನಿದ್ದೆ ಮಾಡಿರಲಿಲ್ಲ. ಅಷ್ಟು ವರ್ಷ ನಾಟಕ ಮಾಡಿ, ಒಂದು ಡೈಲಾಗ್ ಹೇಳಲು ಸೋತೆನಲ್ಲ ಎಂದು. ಮಾರನೇ ದಿನ ಎರಡನೇ ಟೇಕ್ ಓಕೆ ಆಯಿತು. ಅದಾದ ಮೇಲೆ ತಿರುಗಿ ನೋಡುವ ಪ್ರಮೇಯ ಬರಲಿಲ್ಲ…’ ಹೀಗೆ